ವಾಗಿ ಬಸ್ಸು ಮಗಚಿ, ಪುತ್ತೂರು ಸುಳ್ಯದ ೧೫ ಜನರಿಗೆ ತುಂಬ ಪೆಟ್ಟು. ಆನೇಕರ ಮೂಳೆ ಮುರಿತ, ಆಸ್ಪತ್ರೆ ವಾಸ, ಪರಿಣಾಮವಾಗಿ ಪೆಟ್ಟಾದ ಕೆಲವು ಜನಸಾಮಾನ್ಯರ ಮನೆಯಲ್ಲಿ ಉಪವಾಸದ ಪರಿಸ್ಥಿತಿ. ಸರಕಾರದ ಹೈವೇಗಳಲ್ಲಿ ವೇಗ ನಿಯಂತ್ರಿಸಲು ಸೂಕ್ತ ಕ್ರಮ ಕೈಕೊಳ್ಳಬೇಕು. ಅಪಘಾತಕ್ಕೀಡಾದ ವರಿಗೆ ವೈದ್ಯಕೀಯ ಚಿಕಿತ್ಸೆ, ಕಷ್ಟ ನಷ್ಟಗಳಿಗಾಗಿ ಸೂಕ್ತ ಪರಿಹಾರ ಒದಗಿಸಬೇಕು ಎಂದು ಸರಕಾರ ವನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ಲಕ್ಷ್ಮೀಸಾಗರ್.—ಅಧ್ಯಕ್ಷರೆ, ನಾನು ಮಾನ್ಯ ಸೊರಕೆಯವರಿಗೆ ಹೇಳುವುದು ಇಷ್ಟೆ, ಈ ಅಪಘಾತದಲ್ಲಿ ನೊಂದವರಿಗೆ ಮೋಟಾರು ವಾಹನಗಳ ಅಪಘಾತ ಕಾನೂನಿನ ಅನ್ವಯ ಸತ್ತವರು ಸತ್ತಿದ್ದಾರೆ ಎನ್ನುವುದು ದೃಡ ಪಟ್ಟಿದ್ದೇ ಆದರೆ ಅಂತಹವರಿಗೆ ೧೫ ಸಾವಿರ ರೂಪಾಯಿಗಳ ಪರಿಹಾರ ಕೊಡತಕ್ಕಂಥ ಒಂದು ಕಾಯಿದೆ ಜಾರಿಯಲ್ಲಿದೆ ಹಾಗೆಯೇ ಗಾಯ ಗೊಂಡವರಿಗೆ ೬ ತಿಂಗಳೊಳಗಾಗಿ ಸೆಶನ್ಸ್ ನ್ಯಾಯಾಲಯದವರ ಮುಂದೆ ಅರ್ಜಿಸಲ್ಲಿಸಬೇಕು. ಇಷ್ಟು ಕೆಲಸವನ್ನು ಸಂಬಂಧಪಟ್ಟವರು ಮಾಡಬೇಕು.

ಶ್ರೀ ವಿನಯಕುಮಾರ್ ಸೊರಕೆ.—ಆರು ತಿಂಗಳೊಳಗೆ ಪರಿಹಾರ ಸಿಗುತ್ತದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್.—ಸಂಬಂಧಪಟ್ಟವರು ೧೮೦ ದಿನಗಳೊಳಗಾಗಿ ಅರ್ಜಿಯನ್ನು ಸಲ್ಲಿಸ ಬೇಕು. ಹೀಗೆ ಮಾಡಿದಲ್ಲಿ ಕಾನೂನಿನ ಅಡಿಯಲ್ಲಿ ಪರಿಹಾರ ತೆಗೆದುಕೊಳ್ಳತಕ್ಕಂಥ ಕಾಯಿದೆ ಇದೆ.

೧೫) ಮಂಗಳೂರಿನ ಹಂಪನ ಕಟ್ಟೆಯಲ್ಲಿ ಫ್ಲೈಓವರ್ ಬ್ರಿಡ್ಜನ್ನು ರಚಿಸಲು ಒತ್ತಾಯ.

ಶ್ರೀ ಬ್ಲೇಸಿಯಸ್ ಎಂ. ಡಿ. ಸೋಜಾ.—ಮಂಗಳೂರು ನಗರದ ಮಧ್ಯೆ ಇರುವ ಹಂಪನ ಕಟ್ಟೆಯಲ್ಲಿ ಸದಾ ವಿಪರೀತ ಜನಸಂದಣಿ. ೫ ಕಡೆಗಳಿಂದ ವಾಹನ ಬರುವ ಜಂಕ್ಷನ್, ಪರಿಣಾಮವಾಗಿ ಟ್ರಾಫಿಕ್‌ಜಾಂ, ಜನಕ್ಕೆಲ್ಲ ತೊಂದರೆ. ವಾಹನ ಸಂಚಾರಕ್ಕೆ ವಿಳಂಬ. ಆಸ್ಪತ್ರೆ, ಕಚೇರಿ, ಕಾಲೇಜು, ಬ್ಯಾಂಕುಗಳಿಗೆ ಹೋಗುವವರಿಗೆ ತಾಪತ್ರಯ. ಈ ರಸ್ತೆ ಸರಕಾರದ ಪಿ. ಡಬ್ಲ್ಯೂ. ಡಿ. ರಸ್ತೆ. ಈ ಟ್ರಾಫಿಕ್‌ಜಾಂ ನಿವಾರಿಸಲು ಒಂದೇ ದಾರಿ-ಹಂಪನ ಕಟ್ಟೆಯಲ್ಲಿ ಒಂದು ಫ್ಲೈಓವರ್ ರಚಿಸಬೇಕು. ಪಿ, ಡಬ್ಲ್ಯೂ. ಡಿ. ರಸ್ತೆಯಾದ್ದರಿಂದ ಕೂಡಲೇ ಕ್ರಮ ಕೈಕೊಳ್ಳಲು ಸರಕಾರವನ್ನು ಒತ್ತಾಯಿಸುತ್ತೇನೆ

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೆ, ಮಂಗಳೂರಿನ ಮಧ್ಯೆ ಇರುವ ಹಂಪನಕಟ್ಟೆಯಲ್ಲಿ ಹೆಚ್ಚಿಗೆ ವಾಹನ ಸಂಚಾರ ಇರುವುದು ಸರಕಾರದ ಗಮನಕ್ಕೆ ಬಂದಿದೆ. ಅಲ್ಲಿ ಫ್ಲೈಓವರ್ ನಿರ್ಮಿಸುವ ಪ್ರಸ್ತಾವವನ್ನು ಪರಿಶೀಲಿಸಲಾಗಿದ್ದು. ಆ ಪ್ರದೇಶದಲ್ಲಿ ಅನೇಕ ಕಟ್ಟಡಗಳು ಇರುವುದರಿಂದ, ಮತ್ತು ಅವುಗಳನ್ನು ಸ್ವಾಧೀನ ಪಡಿಸಿಕೊಳ್ಳಬೇಕಾಗಿರುವುದರಿಂದ, ಆ ಸ್ಥಳದಲ್ಲಿ ಫ್ಲೈಓವರ್ ನಿರ್ಮಿಸುವುದು ಸೂಕ್ತ ಅಲ್ಲ ಎಂದು ನಿರ್ಣಯ ಮಾಡಲಾಗಿದೆ. ಇದರ ಬದಲು ಒಂದು ಸಬ್‌ವೇ ನಿರ್ಮಿಸಲು ಯೋಜನೆ ಮಾಡಲಾಗುವುದು.

೧೬) ಉಡುಪಿಯಿಂದ ಮಣಿಪಾಲಕ್ಕೆ ವಾಯವ್ಯದೂತದ ವ್ಯವಸ್ಥೆ ಹಾಗೂ ಮುಂಬಯಿ ಗೋವಾಕ್ಕೆ ಇರುವ ಹಡಗು ಪ್ರಯಾಣ ವ್ಯವಸ್ಥೆಯನ್ನು ಮಂಗಳೂರು ಪುಲ್ಲೈಗಳಿಗೂ ವಿಸ್ತರಿಸುವುದು.

ಶ್ರೀಮತಿ ಪುನೋರಮ ಮಧ್ವರಾಜ್.—ಮಾನ್ಯರೆ, ಧಾರ್ಮಿಕ, ಶೈಕ್ಷಣಿಕ, ಆರ್ಥಿಕ ವಾಣಿಜ್ಯ ರಂಗಗಳಲ್ಲಿ ಉಡುಪಿ ಇತ್ತೀಚಿನ ವರ್ಷಗಳಲ್ಲಿ ಗಣನೀಯವಾಗಿ ಬೆಳೆದಿದೆ, ಮೆಡಿಕಲ್, ಇಂಜಿನಿಯರಿಂಗ್ ಲಾ ಕಾಲೇಜುಗಳು ಸರ್ವ ಸೌಕರ್ಯವುಳ್ಳ ಮಣಿಪಾಲದ ಸುಸಜ್ಜಿತ ಆಸ್ಪತ್ರೆ, ಸಿಂಡಿಕೇಟ್ ಬ್ಯಾಂಕಿನ ಆಡಳಿತ ಕಚೇರಿ, ಬೃಹತ್ ವಿೂನುಗಾರಿಕಾ ಕೇಂದ್ರವಾದ ಮಲ್ಪೆಯ ಬಂದರು, ಉಡುಪಿಯ ಧಾರ್ಮಿಕ ಸ್ಥಳಗಳೆಂ ಇವೆಲ್ಲ ಬೃಹದಾಕಾರದಲ್ಲಿ ಜನರನ್ನು ಆಕರ್ಷಿಸುತ್ತವೆ. ಹೀಗಾಗಿ ಜನರ ಪ್ರಯಾಣಕ್ಕೆ ಸೂಕ್ತ ವ್ಯವಸ್ಥೆ ಮಾಡುವುದು ಅಗತ್ಯ. ಉಡುಪಿ ಮಣಿಪಾಲ ವಠಾರಕ್ಕೆ ವಾಯುದೂತ ಪ್ರಯಾಣ ವ್ಯವಸ್ಥೆ ಆಗಬೇಕು. ಇದರಿಂದ ಉಡುಪಿ ಮಾತ್ರವಲ್ಲ, ಕುಂದಾಪುರ, ಭಟ್ಕಳ, ಹೊನ್ನಾವರ,